ಉತ್ತರ ಕೊಡುವಂತಹ ಸೌಜನ್ಯತೆಯನ್ನು ತೋರದೆ ಇದ್ದರೆ ನಾವು ಏನು ಮಾಡಬೇಕು ಹೇಳಿ.

ಶ್ರೀ ಸಿ.ಎಂ.ಉದಾಸಿ : ಮಾನ್ಯ ಉಪಮುಖ್ಯಮಂತ್ರಿಯವರಿಗೆ ಹೇಳುತ್ತೇನೆ ಬಿಡಿ. ತಾವು ಇಳಕಲ್ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂದು ಕೇಳುತ್ತಿದ್ದೀರಲ್ಲವೇ? ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವಂತಹ ಕೆಲಸವನ್ನು ಮಾಡುತ್ತೇನೆ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ : ಇಳಕಲ್ ನಗರವನ್ನು ತಾವು ತಾಲ್ಲೂಕು ಕೇಂದ್ರವನ್ನಾಗಿ ಘೋಷಣೆ ಮಾಡುತ್ತೇವೆಂದು ಹೇಳಿ.

ಶ್ರೀ ಸಿ.ಎಂ. ಉದಾಸಿ : ನಾನು ಅವರಿಗೆ ಹೇಳುತ್ತೇನೆ.

ಅಧ್ಯಕ್ಷರು : ಆಯಿತು.

7. ವಿಷಯ : ಹುನಗುಂದದಲ್ಲಿ ಬಸ್ ಡಿಪೋ ನಿರ್ಮಿಸುವ ಬಗ್ಗೆ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) : ಮಾನ್ಯ ಅಧ್ಯಕ್ಷರೆ, ಹುನಗುಂದ ನಗರವು ತಾಲ್ಲೂಕು ಕೇಂದ್ರವಾಗಿದ್ದು ಔದ್ಯೋಗಿಕವಾಗಿ ಅಭಿವೃದ್ಧಿ ಹೊಂದಿ ಹಲವಾರು ಸಂಪರ್ಕ ಜಾಲವನ್ನು ಹೊಂದಿರುವುದರಿಂದ ಹುನಗುಂದದಲ್ಲಿ ಬಸ್ ಡಿಪೋ ನಿರ್ಮಿಸುವ ಬಗ್ಗೆ ಮಾನ್ಯ ಉಪಮುಖ್ಯ ಮಂತ್ರಿಗಳ (ಗೃಹ ಮತ್ತು ಸಾರಿಗೆ ಸಚಿವರು) ಗಮನ ಸೆಳೆಯುತ್ತೇನೆ. ಹುನಗುಂದದಲ್ಲಿ 1980ರ ದಶಕದಲ್ಲಿ ಬಸ್ ಡಿಪೋವನ್ನು ನಿರ್ಮಾಣ ಮಾಡುವುದರ ಬಗ್ಗೆ ಹೋರಾಟ ಮಾಡಿ ಅವತ್ತಿನದಿವಸ ಗೋಲಿಬಾರ್ ಆಗಿ 3 ಜನರು ಸತ್ತಿದ್ದಾರೆ. ಆದ್ದರಿಂದ ಹುನಗುಂದ ತಾಲ್ಲೂಕಿನಲ್ಲಿ ಬಸ್ ಡಿಪೋ ನಿರ್ಮಾಣ ಮಾಡಬೇಕೆಂದು ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) (ಮಾನ್ಯ ಉಪಮುಖ್ಯಮಂತ್ರಿಗಳು, ಗೃಹ ಮತ್ತು ಸಾರಿಗೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಹುನಗುಂದ ಪಟ್ಟಣದಿಂದ ಸುಮಾರು 11 ಕಿ.ಮೀ. ಅಂತರದಲ್ಲಿ ಹುನಗುಂದ ತಾಲ್ಲೂಕಿನ ಇಳಕಲ್ ನಗರದಲ್ಲಿ 1980ರಲ್ಲಿ ಬಸ್ ಡಿಪೋ ಪ್ರಾರಂಭಿಸಲಾಗಿದ್ದು ಸದರಿ ಘಟಕದಿಂದ ಹುನಗುಂದ ತಾಲ್ಲೂಕಿಗೆ ಸಾರಿಗೆ

ವ್ಯವಸ್ಥೆಯನ್ನು ಸಮರ್ಪಕವಾಗಿ ಒದಗಿಸಲಾಗುತ್ತಿದೆ. ಹುನಗುಂದ ಬಸ್ ನಿಲ್ದಾಣದಿಂದ ಪ್ರತಿ ದಿನ 291 ಬಸ್‌ಗಳು ಸ್ಥಳೀಯ ಮತ್ತು ಪ್ರಮುಖ ನಗರ, ತಾಲ್ಲೂಕು ಮತ್ತು ಜಿಲ್ಲಾ ಮತ್ತು ರಾಜಧಾನಿಗೆ ಸಮರ್ಪಕವಾಗಿ ಸಾರಿಗೆಯು ಕಾರ್ಯಾಚರಣೆಯಾಗುತ್ತಿದೆ. ಇದಕ್ಕೆ ಮುಂದುವರಿದು ಇನ್ನೂ ಹೆಚ್ಚಿನ ಬೇಡಿಕೆಗಳ ಬಗ್ಗೆ ಪ್ರಸ್ತುತ ಇರುವ ಘಟಕದಿಂದ ಪೂರೈಸಬಹುದಾಗಿದೆ. ಈ ಭಾಗದ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಕರ್ಯವನ್ನು ಕಲ್ಪಿಸುವ ಸಲುವಾಗಿ ಹುನಗುಂದ ನಗರದಲ್ಲಿ ಹಳೆಯ ಬಸ್ ನಿಲ್ದಾಣವನ್ನು ತೆಗೆದುಹಾಕಿ 1.98 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನೂತನ ಬಸ್ ನಿಲ್ದಾಣವನ್ನು ನಿರ್ಮಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. ಈಗಾಗಲೇ ಇಳಕಲ್ ನಗರದಲ್ಲಿ ಪ್ರಾರಂಭವಾಗಿರುವ ಬಸ್ ಡಿಪೋ ಕಾರ್ಯಚರಣೆಯ ದೃಷ್ಟಿಯಿಂದ ಹುನಗುಂದ ನಗರದಲ್ಲಿ ಪ್ರತ್ಯೇಕ ಬಸ್ ಡಿಪೋ ನಿರ್ಮಾಣ ಸೂಕ್ತವಾಗಿರುವುದಿಲ್ಲ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಹುನಗುಂದ ನಗರವು ತಾಲ್ಲೂಕು ಕೇಂದ್ರವಾಗಿದ್ದು ಹಲವಾರು national highway ಮತ್ತು state highwayಗಳು ಕೂಡ ಹುನಗುಂದ ಪಟ್ಟಣದ ಮುಖಾಂತರ ಹಾದುಹೋಗುತ್ತಿದೆ. ಬಹಳ ವರ್ಷಗಳಿಂದ 1980ರ ದಶಕದಿಂದ ಆ ನಗರದಲ್ಲಿ ಬಸ್ ಡಿಪೋ ನಿರ್ಮಾಣ ಮಾಡಬೇಕೆಂದು ಹೇಳಿ ಹೋರಾಟ ಕೂಡ ಆಯಿತು. ಆ ಹೋರಾಟದಲ್ಲಿ ಗೋಲಿಬಾರ್ ಆಗಿ ಮೂರು ಜನ ಪ್ರಾಣತ್ಯಾಗ ಮಾಡಿದ್ದಾರೆ. ಅಂದಿನಿಂದ ಇವತ್ತಿನವರೆಗೆ ಕೂಡ ಹುನಗುಂದಕ್ಕೆ ಬಸ್ ಡಿಪೋ ಬೇಕು ಎಂದು ಹಲವಾರು ಸಂದರ್ಭಗಳಲ್ಲಿ ಪ್ರತಿಭಟನೆ ಮಾಡುತ್ತಿದ್ದರೂ ಸಹ ಸರ್ಕಾರ ಆ ಕಡೆ ಗಮನವನ್ನು ಹರಿಸುತ್ತಿಲ್ಲ. ದಯವಿಟ್ಟು ನಾನು ಇವತ್ತು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಈ ಬಸ್ ಡಿಪೋ ನಿರ್ಮಾಣ ಮಾಡಲಿಕ್ಕೆ ಆಗುವುದಿಲ್ಲ ವೆಂದು ಏನು ಹೇಳಿದ್ದಾರೆ, ಅದನ್ನು ಬಿಟ್ಟು ಹುನಗುಂದ ತಾಲ್ಲೂಕು ಕೇಂದ್ರ ವಾಗಿರುವುದಿಂದ ಅಲ್ಲಿ ಬಸ್ ಡಿಪೋ ಮಾಡಬೇಕೆಂದು ಒತ್ತಾಯವನ್ನು ಮಾಡುತ್ತಿದ್ದೇನೆ.

ಅಧ್ಯಕ್ಷರು : ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತನ್ನಿ.

ಶ್ರೀ ಸಿ.ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು) : ಈ ವಿಷಯವನ್ನು ಮಾನ್ಯ ಸಾರಿಗೆ ಸಚಿವರ ಗಮನಕ್ಕೆ ತರುತ್ತೇನೆ.

8. ವಿಷಯ : ಸ್ಯಾಂಕಿ ಕೆರೆ ಒತ್ತುವರಿಯಾಗಿರುವುದನ್ನು ಕೂಡಲೇ ತೆರವುಗೊಳಿಸುವ ಬಗ್ಗೆ

ಡಾ : ಸಿ.ಎನ್. ಅಶ್ವತ್ಥನಾರಾಯಣ (ಮಲ್ಲೇಶ್ವರಂ) : ಸ್ಯಾಂಕಿ ಕೆರೆ ಒತ್ತುವರಿಯಾಗಿರುವದನ್ನು ಕೂಡಲೇ ತೆರವುಗೊಳಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

ಅಧ್ಯಕ್ಷರು : ಈ ಪ್ರಶ್ನೆಗೆ ಉತ್ತರ ಬಂದಿಲ್ಲ, ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರೋಣ.

ಶ್ರೀ ಸಿ.ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು) : ಈ ಪ್ರಶ್ನೆಗೆ ಉತ್ತರ ಬಂದಿಲ್ಲ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ಡಾ: ಸಿ.ಎನ್. ಅಶ್ವತ್ಥನಾರಾಯಣ (ಮಲ್ಲೇಶ್ವರಂ) : ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಗಮನ ಸೆಳೆಯಲಿಕ್ಕೆ 15 ದಿವಸಗಳ ಹಿಂದೆಯೇ ಕೊಟ್ಟಿದ್ದೇನೆ. ಉತ್ತರವನ್ನು ಕೊಟ್ಟಿಲ್ಲ.

ಅಧ್ಯಕ್ಷರು : ಅವರು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಾರೆ.

ಶ್ರೀ ಸಿ.ಎಂ. ಉದಾಸಿ : ಉತ್ತರ ಬಂದಿಲ್ಲವೆಂದು ಹೇಳುತ್ತಿದ್ದೇನೆ.

ಡಾ: ಸಿ.ಎನ್. ಅಶ್ವತ್ಥನಾರಾಯಣ : ಸ್ಯಾಂಕಿ ಕೆರೆ 6 ಎಕರೆ ಒತ್ತುವರಿಯಾಗಿದೆ. ಈ ಬಗ್ಗೆ ಕ್ರಮ ಜರುಗಿಸಲಿಕ್ಕೆ ಅವರ ಗಮನಕ್ಕೆ ತರಬೇಕು.

ಅಧ್ಯಕ್ಷರು : ಈಗ ಉತ್ತರವಿಲ್ಲದೆ ಚರ್ಚೆ ಮಾಡಲಿಕ್ಕೆ ಆಗುವುದಿಲ್ಲ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರೋಣ.

ಡಾ: ಸಿ.ಎನ್. ಅಶ್ವತ್ಥನಾರಾಯಣ : ಅಲ್ಲಿ ಸರ್ವೆ ವರದಿ ಪ್ರಕಾರ ಅಲ್ಲಿ 6 ಎಕರೆ ಒತ್ತುವರಿಯಾಗಿದೆ. ಅದರ ಬಗ್ಗೆ ಕೂಡಲೇ ಕ್ರಮ ಜರುಗಿಸಲು ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.